ಕಾಯ್ದೆ 1961 ಜಾರಿಗೆ ಬಂದ ನಂತರ ಶಿವಮೊಗ್ಗ ಜಿಲ್ಲಾಧಿಕಾರಿಗಳು ಹೊರಡಿಸಿದ ನೋಟಿಫಿಕೇಷನ್ ನಂ. ಎಲ್‌ಆರ್‌ಎಫ್:ಸಿಆರ್:150: 79-80 ದಿನಾಂಕ: 21-10-91ರಲ್ಲಿ ಕಾರ್ಖಾನೆಯ 3715-29 ಎಕರೆ ಜಮೀನಿನಲ್ಲಿ 50 ಎಕರೆ 'ಎ' ಕ್ಲಾಸ್ ಜಮೀನನ್ನು ಕಂಪನಿಗೆ ಉಳಿಸಿ, ಉಳಿದ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆ. ಈ ಸಂಬಂಧ ಕಂಪನಿಯು ಹೈಕೋರ್ಟಿನಲ್ಲಿ ದಾವೆಯನ್ನು ಹೂಡಿದ್ದು (ರಿ.ನಂ. 25626 : 91) ಇದಕ್ಕೆ ಹೈಕೋರ್ಟ್‌ನಿಂದ ದಿ: 22-11-91ರಲ್ಲಿ ತಡೆಯಾಜ್ಞೆ ನೀಡಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ರಾಜ್ಯದಲ್ಲಿರುವ ಪಶು ಚಿಕಿತ್ಸಾಲಯಗಳ ಬಗ್ಗೆ

3110 - ಶ್ರೀ ಚೆನ್ನಿಗಪ್ಪ. ಸಿ (ಕೊರಟಗೆರೆ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳಿವೆ? ಜಿಲ್ಲಾವಾರು ವಿವರ ನೀಡುವುದು?*
2. *ರಾಜ್ಯದಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯುವ ತೀರ್ಮಾನ ಸರ್ಕಾರದ ಪರಿಶೀಲನೆಯಲ್ಲಿದೆಯೇ? ಜಿಲ್ಲಾವಾರು ವಿವರ ನೀಡುವುದು?*
3. *ಹಾಗಿದ್ದಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳನ್ನು ಎಲ್ಲೆಲ್ಲಿ ತೆರೆಯಲಾಗುವುದು? ಜಿಲ್ಲಾವಾರು ವಿವರ ನೀಡುವುದು?*

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

1. 853- ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
2. ಇಲ್ಲ.
3. ಉದ್ಭವಿಸುವುದಿಲ್ಲ.

ಅನುಬಂಧ

ಕ್ರ.ಸಂ.	ಜಿಲ್ಲೆಯ ಹೆಸರು	ಪಶು ಚಿಕಿತ್ಸಾಲಯಗಳ ಸಂಖ್ಯೆ
1.	ಬೆಂಗಳೂರು	38
2.	ಬೆಂಗಳೂರು ಗ್ರಾಮಾಂತರ	37
3.	ಬೆಳಗಾಂ	56
4.	ಬಳ್ಳಾರಿ	24
5.	ಬೀದರ್	30
6.	ವಿಜಾಪುರ	16
7.	ಚಿಕ್ಕಮಗಳೂರು	41
8.	ಚಿತ್ರದುರ್ಗ	29
9.	ದಕ್ಷಿಣ ಕನ್ನಡ	20
10.	ಧಾರವಾಡ	16
11.	ಗುಲ್ಬರ್ಗಾ	43
12.	ಹಾಸನ	47
13.	ಕೊಡಗು	21
14.	ಕೋಲಾರ	52
15.	ಮಂಡ್ಯ	70
16.	ಮೈಸೂರು	37
17.	ರಾಯಚೂರು	13
18.	ಶಿವಮೊಗ್ಗ	31
19.	ತುಮಕೂರು	54
20.	ಉತ್ತರ ಕನ್ನಡ	25
21.	ದಾವಣಗೆರೆ	44
22.	ಬಾಗಲಕೋಟೆ	18
23.	ಗದಗ	15
24.	ಹಾವೇರಿ	29
25.	ಚಾಮರಾಜನಗರ	14
26.	ಉಡುಪಿ	22
27.	ಕೊಪ್ಪಳ	11
		853